ಬಗ್ಗೆ ಸ್ಪರ್ಧೆ; ಇರುವ ತುಂಡು ಆಸ್ತಿಯನ್ನು ತಾಯಿ ಇನ್ನೊಬ್ಬಳಿಗೆ ಕೊಟ್ಟರೆ ಎಂಬ ಆತಂಕ. ಹಾಗಾಗಿ ಗಂಗಕ್ಕ ಎಲ್ಲರಿಂದಲೂ ಒಂದು ಅಂತರವನ್ನು ಅನಿವಾರ್ಯವಾಗಿ ಕಾಪಾಡಿಕೊಂಡಿದ್ದಳು. ಯಾರೂ ನಂಬಿಕೆಗೆ ಅರ್ಹರಲ್ಲ ಎಂದು ನಂಬಿಕೊಂಡಿದ್ದಳು.

★★★

'ಬಿಸಿಲು ಭಾರೀ ಐತಿವತ್ತು. ನಮ್ಮೂರಿನ್ಯಾಗೂ ಈ ನಮೂನಿ ಇಲ್ರಿ ಅವ್ವಾರೆ. ಸ್ವಲ್ಪ ಮಜ್ಗಿ ಇದ್ರ್ ಕೊಡ್ರಿ' ಎನ್ನುತ್ತಾ ಮಾರನೇ ದಿನವೂ ಬಾಗಿಲು ತಟ್ಟಿದ್ದಳು ಅದೇ ಹೆಂಗಸು. ಹೊತ್ತು ಹೊತ್ತಿಗೆ ಹಾಲು ಕೊಡುವ ಆಕಳು ಮನೆಯಲ್ಲಿರುವುದರಿಂದ ಗಂಗಕ್ಕನ ಮನೆಯಲ್ಲಿ ಮಜ್ಜಿಗೆಗೇನೂ ಕೊರತೆಯಿಲ್ಲ. ಆದರೂ... ಇವಳಿಗೆ ಕೊಡಬಹುದೇ? ಗಂಗಕ್ಕನ ಮನದಲ್ಲಿ ಶಂಕೆಯಿದ್ದರೂ ಅವಳ ಬೆನ್ನಿಗಿದ್ದ ಮೂವರು ಮಕ್ಕಳನ್ನು ಕಂಡು ಯಾವುದೋ ಮೋಡಿಗೆ ಒಳಗಾದವಳಂತೆ ಮಜ್ಜಿಗೆ ಕೊಟ್ಟಿದ್ದಳು. ಸಂಜೆಯವರೆಗೂ ಆಕೆಯ ಮನಸ್ಸು ಹಗೂರಾದಂತೆ ಇತ್ತು. ರಾತ್ರಿ ಮಗು ಅಳುತ್ತಿದ್ದ ಧ್ವನಿಗೆ 'ಪಾಪ, ಉಷ್ಣಕ್ಕೆ ಹೊಟ್ಟೆ ನೋವೇನ ಮಾಣಿಗೆ' ಎನ್ನುತ್ತಾ ತನ್ನ ಯೋಚನೆಗೆ ತಾನೇ ನಕ್ಕಳು.

ಮಾರನೇ ದಿನ ಬೆಳಗ್ಗೆ ಒಂಬತ್ತು ಗಂಟೆಯವರೆಗೆ ಕಾದರೂ ಪಂಚಾಯತದ ನೀರು ಬರಲೇ ಇಲ್ಲ. 'ಎಂತ ಆಯ್ತೋ?' ನೀರು ಬಿಡುವ ಶೀನನನ್ನು ವಿಚಾರಿಸಿದಳು ಗಂಗಕ್ಕ. ಬೋರ್ವೆಲ್‌ನಲ್ಲೇ ನೀರು ಕಡಿಮೆಯಾಗಿದೆಯೆಂದೂ ಟ್ಯಾಂಕಿನಲ್ಲಿ ಸಂಗ್ರಹಿಸಿ, ಮೂರು ದಿನಕ್ಕೊಮ್ಮೆ ನೀರು ಬಿಡುವ ವ್ಯವಸ್ಥೆಯಾಗಿದೆಯೆಂದೂ ಆತ ತಿಳಿಸಿದ. ಅಯ್ಯೋ ದೇವ್ರೆ! ಮನೆ ಬಾವಿಯಲ್ಲಿ ಕುಡಿಯಲಷ್ಟೇ ನೀರಿರುವುದು. ಪಾತ್ರೆ, ಬಟ್ಟೆ, ಸ್ನಾನ, ಆಕಳಿಗೆ, ಹಿತ್ತಲ ಗಿಡಗಳಿಗೆ ಎಲ್ಲದಕ್ಕೂ ಏನು ಮಾಡುವುದು ಎಂಬುದು ಬಗೆಹರಿಯಲಿಲ್ಲ. ದೇವಿಯ ಬಳಿ ದೊಡ್ಡ ಧ್ವನಿಯಲ್ಲಿ ಅಲವತ್ತುಕೊಳ್ಳುತ್ತಿದ್ದ ಗಂಗಕ್ಕನ ಪ್ರಲಾಪ ನಿಂತಿದ್ದು 'ನೀರ್ ಬೇಕೇನ್ರಿ?' ಎಂದು ಅಚಾನಕ್ಕಾಗಿ ತೂರಿ ಬಂದ ಪ್ರಶ್ನೆಗೆ. ನೋಡಿದರೆ ಅದೇ ಹೆಂಗಸು! 'ಸಂಜಿ ಮುಂದ ನಮ್ ನೀರಿನ್ ಟ್ಯಾಂಕರ್ ಬರ್ತಾವು. ಲಗೂನ್ ತುಂಬಿಸ್ಕೋರಿ' ಎಂದು ನಗೆಬೀರಿದ ಆಕೆ 'ಸ್ವಲ್ಪ್ ಶೆಗಣಿ ಕೊಡ್ರಿ' ಎಂದು ಕೇಳಿದಳು. ಎಲಾ ಇವಳಾ! ಯಾರಿಗೆ ಯಾವುದು ಬೇಕು ಎಂದು ತಿಳಿದುಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುತ್ತಾಳಲ್ಲಾ ಎನಿಸಿತು ಗಂಗಕ್ಕನಿಗೆ. ಆದರೆ ದೇವಿಯೇ ಮುಂದಾಗಿ ಕೊಟ್ಟಿಗೆಯಲ್ಲಿದ್ದ ಎರಡು ಮುದ್ದೆ ಸೆಗಣಿಯನ್ನು ಬಾಚಿಕೊಟ್ಟಳು.

ಸಂಜೆಗೆ ಬಿಡಾರದವರಿಗಾಗಿ ನೀರು ತಂದ ಟ್ಯಾಂಕರ್‌ನಿಂದ ಗಂಗಕ್ಕನಿಗೆ ಎರಡು ದಿನಗಳಿಗಾಗುವಷ್ಟು ನೀರು ಬಿಡಿಸಿಕೊಟ್ಟಳು ಆ ಹೆಂಗಸು. ಯಾಕೋ ಎಷ್ಟು ಹೊರಳಿದರೂ ರಾತ್ರಿ ನಿದ್ರೆ ಬರಲಿಲ್ಲ ಗಂಗಕ್ಕನಿಗೆ. ಮರುದಿನ ಬೆಳಗ್ಗೆ ಅರಿವಿಲ್ಲದೆಯೇ ಬಿಡಾರದ ಕಡೆಗೆ ಆಕೆಯ ದೃಷ್ಟಿ ಹೋಯಿತು. ಅಲ್ಲಿಂದ ಇಳಿದು ಬರುತ್ತಿದ್ದ ಆ ಹೆಂಗಸು ಬೀರಿದ ನಿರ್ಮಲ ನಗೆಗೆ ಪ್ರತಿನಗೆ ನೀಡದೆ ಇರಲಾಗಲಿಲ್ಲ ಗಂಗಕ್ಕನಿಗೆ. 'ಕ್ಯೆಲಸ್ ಆಯ್ತೆನ್ರೀ ಅವ್ವಾರೆ?' ಎಂಬ ಆಕೆಯ ಪ್ರಶ್ನೆಗೆ ತಲೆಯಾಡಿಸಿ, 'ಎಂತದೇ ನಿನ್ ಹೆಸರು?' ಕೇಳಿದಳು ಗಂಗಕ್ಕ. 'ಶಿವಮ್ಮನ್ರೀ. ನಮ್ಮೂರು ಹಾನಗಲ್ಲಿ ಗೂ ಮುಂದೈತ್ರಿ' ಎಂದಳು ಆಕೆ. 'ಮಜ್ಜಿಗೆ ಇಟ್ಟಿದ್ದೆ. ಬೇಕಾದ್ರೆ ತಗಂಡ್ಹೋಗು' ಎಂಬ ಗಂಗಕ್ಕನ ಮಾತಿಗೆ ಮುಖವರಳಿಸಿದ ಆಕೆ, 'ಈಗ್ ಬಂದ್ ಒಯ್ತೇನ್ರಿ' ಎನ್ನುತ್ತಾ ಸೆಗಣಿ ಬುಟ್ಟಿ ಹೊತ್ತು ಹೋದಳು.

★★★

ಅಂತೂ ಒಂದಲ್ಲಾ ಒಂದು ಕಾರಣಕ್ಕೆ ಶಿವಮ್ಮ ಪ್ರತಿದಿನ ಗಂಗಕ್ಕನ ಮನೆಗೆ ಬರುತ್ತಿದ್ದಳು. ಮೊದಮೊದಲು ಅವಳ ಆಗಮನದಿಂದ ಕಿರಿಕಿರಿಗೆ ಒಳಗಾಗುತ್ತಿದ್ದ ಗಂಗಕ್ಕನಿಗೆ ಈಗ ಅವಳ ಬಗೆಗಿನ ಶಂಕೆ ದೂರಾಗುತ್ತಿತ್ತು. ಆ ದಿನವಂತೂ ಆಕೆ ಮಜ್ಜಿಗೆ ಕೇಳಲು ಬರಲಿಲ್ಲವೆಂದು ಒಂದು ಕೌಳಿಗೆ